ಕುಣಿಯೊಳಗ ಈ ಪುಸ್ತಕ ಒಗೆದರೆ ಮಾತ್ರ ಅಂವನ ಆತ್ಮಕ್ಕ ಶಾಂತಿ ಸಿಗತೈತಿ.' ಬಾವಿ ಕಟ್ಟೆಯ ಮೇಲೆ ಆಕೆ ಇದನ್ನೆಲ್ಲ ಹೇಳಿದಾಗ ಆಕೆಯ ಗೆಳತಿಯರು ನಕ್ಕೇ ನಗುವರು. ಅವರೊಂದಿಗೆ ಬಾವಿಯ ನೀರು ಸಹ ಅತ್ತಿಂದಿತ್ತ ಹೊಯ್ದಾಡಿ ನಗುವುದು. ಮಾಯಕ್ಕನ ಆಡಳಿತ ಮೆಚ್ಚಿಕೊಂಡಿದ್ದ ಸಂತಿ ಓಣಿಯ ಮಾದೇವಪ್ಪ ಗ್ರಾಮದ ಸುದ್ದಿಯನ್ನು ನೀಟಾಗಿ ಕತ್ತರಿಸಿ ಅದಕ್ಕೆ ಹಳೆಯ ಪುಸ್ತಕದ ರಟ್ಟು ಅಂಟಿಸಿ, ಗಾಜಿನ ಕಟ್ಟು ಹಾಕಿಸಿಕೊಂಡು ಬಂದಿದ್ದನು. ಮನೆದೇವರ ಪೂಜೆ ತಪ್ಪಿದರೂ ತಪ್ಪಲಿ. ಆದರೆ ಮುಂಜಾನೆ ಮತ್ತು ಸಂಜೆ ಎರಡೂ ಹೊತ್ತು ಅದನ್ನು ತನ್ನ ಹಳದಿ ರೇಶಿಮೆ ರುಮಾಲಿನಿಂದ ಒರೆಸುವುದನ್ನು ಮಾತ್ರ ಆತ ತಪ್ಪಿಸುತ್ತಿರಲಿಲ್ಲ. ಯಾಕೊ ಬಹಳ ದಿನಗಳಿಂದ ಮಲ್ಲೂರಿನ ಸುದ್ದಿಯಿಲ್ಲ ಎನ್ನುವವರ ಬಾಯಿ ಮುಚ್ಚಿಸಲೆಂದೆ ಮಾಯಕ್ಕ ದ್ಯಾಮವ್ವದೇವಿಗೆ ಪೂಜೆ ಮಾಡಿದಳೆಂದು ಕೆಲವರು ಮಾತಾಡಿಕೊಂಡರು.

ಒಟ್ಟಿನಲ್ಲಿ ಮಾಯಕ್ಕಳಿಂದ ಮಲ್ಲೂರಿನ ಹೆಸರು ಹೆಚ್ಚಾಗುತ್ತಲೇ ಇತ್ತು. ಮಲ್ಲೂರಿನ ಒನಪು ಹೆಚ್ಚಾಗುತ್ತಿದೆಯೊ ಇಲ್ಲಾ ಮಾಯಕ್ಕನ ವಯ್ಯಾರ ಹೆಚ್ಚಾಗುತ್ತಿದೆಯೊ ಕರಬುವವರು ಇದ್ದೇ ಇದ್ದರು. ಅವಳು ಮಾತಾಡುವ ರೀತಿಯೇನು? ಸಹಾಯಕರಿಗೆ ಸೂಚನೆ ಕೊಡುವುದೇನು? ಓಹ್! ಮೊದಲ ಸಲ ಮಾಯಕ್ಕ ಪಂಚಾಯತಿ ಅಧ್ಯಕ್ಷೆಯಾಗಿ ಕುರ್ಚಿಯಲ್ಲಿ ಕುಳಿತಿದ್ದನ್ನು ನೋಡಲು ಹತ್ತಾರು ಊರುಗಳ ಮಂದಿ ಕೂಡಿದ್ದರು. ಕೆಲವು ಮಹಿಳೆಯರಂತೂ ತಮ್ಮ ತಮ್ಮ ಮನೆಗೆ ಹೋದ ಮೇಲೆ ಮಾಯಕ್ಕ ಕುರ್ಚಿಯ ಮೇಲೆ ಕುಳಿತಿರುವ ರೀತಿಯಲ್ಲಿಯೆ ತಾವೂ ಕುಳಿತುಕೊಂಡು ಎಷ್ಟೋ ದಿನಗಳವರೆಗೆ ಅವಳನ್ನು ಅನುಕರಣೆ ಮಾಡುತ್ತಿದ್ದರು. ಅವಳು ಉಡುತ್ತಿದ್ದ ಸೀರೆಗಳನ್ನು ತಾವು ಉಡತೊಡಗಿದರು. ಬೈಲಹೊಂಗಲದದಿಂದ ಲೂನಾ ಮೇಲೆ ಸೀರೆ ಮಾರಲು ಬರುತ್ತಿದ್ದ ಲಕ್ಷೀಕಾಂತನಿಗೆ ಮಲ್ಲೂರು ಭಾಗ್ಯದ ಬಾಗಿಲು ತೆರೆಯಿತು. ಮಾಯಕ್ಕನ ಸೀರೆ ಎನ್ನುವ ಹೊಸ ಬ್ರ್ಯಾಂಡ್ ಸೀರೆಯನ್ನೇ ಲಕ್ಷೀಕಾಂತ ಆರಂಭ ಮಾಡಿದ್ದ. 'ಮಾಯಕ್ಕನ ಸೀರೆ' ಎಂದು ಅದು ಪ್ರಸಿದ್ಧಿಯಾಯಿತು. ಲಕ್ಷ್ಮೀಕಾಂತ ಯಾವುದೇ ಹಳ್ಳಿಗೆ ಹೋದರೂ ಹೆಂಗಸರು ಮೊದಲು ಆ ಸೀರೆಯನ್ನೆ ಕೇಳುವರು.

'ಅಲ್ರಿ ಅಣ್ಣಾರ, 'ಮಾಯಕ್ಕನ ಸೀರೆ' ಅನ್ನೋ ಹೊಸ ಪತ್ತಲು ಬಂದೈತಿ ಅಂತಲ್ಲ? ಅದನ್ನ ತೋರಿಸ್ರಿ. ಅದನ್ನ ಉಟ್ಟುಕೊಂಡಾಗ ನಾವೂ ಮಾಯಕ್ಕನಂಗ ಕಾಣಬೇಕು ನೋಡ್ರಿ. ಇನ್ನೂ ಒಂದು ಮಾತಂದ್ರ ನಾವು ಆಕಿಗಿಂತ ಚುಲೋ ಕಾಣಬೇಕು ನೋಡ್ರಿ. ಅಕಸ್ಮಾತ್ ಆಕಿ ಇಲ್ಲದಾಗ ಆಕೀ ಆಫೀಸಿಗೆ ಹೋಗಿ ಕುಂತರೂ ನಾವು ಬ್ಯಾರೆ ಅಂತ ಅನಿಸಬಾರದು. ಮಾಯಕ್ಕನೇ ಬಂದು ಕುಂತಾಳ ಅನಿಸ್ಬೇಕು!' ಅಂತಹ ಮಾತುಗಳಿಂದ ಮಲ್ಲೂರಿನ ಉಲ್ಲಾಸದ ಪಲ್ಲವಿ ಮತ್ತೂ ಚಿಗುರುತ್ತಿತ್ತು. ಕಳೆದ ಎರಡು ವರ್ಷಗಳಲ್ಲಿ ಆತ ಮಾಯಕ್ಕ ಹೆಸರಿನ ಬ್ರ್ಯಾಂಡ್ ಸೀರೆಯನ್ನು ಮಾರಿ ಗಳಿಸಿದ ಹಣವು ಹಿಂದಿನ ಹತ್ತು ವರ್ಷಗಳಲ್ಲಿ ಗಳಿಸಿದ ಹಣಕ್ಕಿಂತಲೂ ಹೆಚ್ಚಾಗಿತ್ತು! ಲಕ್ಷ್ಮೀಕಾಂತ ಹಳೆಯ ಲೂನಾ ಮಾರಿ ಮಾರುತಿ ಫೈನಾನ್ಸ್ ಕಂಪನಿಯಲ್ಲಿ ಮೂವತ್ತು ಸಾವಿರ ರೂಪಾಯಿ ಸಾಲ ಮಾಡಿ ಸೆಕೆಂಡ್ ಹ್ಯಾಂಡ್ ಮಾರುತಿ ಓಮ್ನಿ ಗಾಡಿ ತೆಗೆದುಕೊಂಡಿದ್ದ. ವಿಶೇಷವೆಂದರೆ ಆ ಫೈನಾನ್ಸ್ ಕಂಪನಿ ನಿರ್ದೇಶಕರ ಹೆಂಡತಿಯರು ಮಾಯಕ್ಕ ಬ್ರ್ಯಾಂಡ್ ಸೀರೆಯನ್ನು ಬಹಳ ಇಷ್ಟಪಟ್ಟರಂತೆ. ಆ ಧೈರ್ಯದ ಮೇಲೆ ಲಕ್ಷ್ಮೀಕಾಂತ ಮತ್ತಷ್ಟು ಸಾಲ ಮಾಡಿ ಬೈಲಹೊಂಗಲದ ಇಂಚಲ ಮಠದ ರಸ್ತೆಯಲ್ಲಿ 'ಮಾಯಾ ಸಾರಿ ಸೆಂಟರ್' ಎನ್ನುವ ಅಂಗಡಿ ಆರಂಭ ಮಾಡಿದ್ದು ದೊಡ್ಡ ಸುದ್ದಿಯಾಗಿತ್ತು. ಮೊನ್ನೆ ಮೊನ್ನೆಯಷ್ಟೆ ಮಾಯಕ್ಕ ಬೈಲಹೊಂಗಲಕ್ಕೆ ಹೋಗಿ ಆ ಸಾರಿ ಸೆಂಟರ್ ಉದ್ಘಾಟನೆ ಮಾಡಿ ಬಂದಳು. ಅದು ಸಹ ಪೇಪರದಲ್ಲಿ ಬಂದು ಸೀರೆಗಳ ವ್ಯಾಪಾರ ಹೆಚ್ಚಿತು.

ಮುಂದೆ ಒಂದು ಸಲ ಲಕ್ಷ್ಮೀಕಾಂತ ಸಿಕ್ಕಾಗ ಆಕೆ ನಕ್ಕೊಂತ ಹೇಳಿದಳು, 'ಅಲ್ಲೋ ಲಕ್ಷ್ಮೀಕಾಂತ, ನೀನು ವ್ಯಾಪಾರ ಮಾಡಿ ದುಡ್ಡು ಗಳಿಸ್ಕೋಂತ ಹೊಂಟಿ. ಸಿನೆಮಾದವರು ಹೀಂಗ ಜಾಹೀರಾತು ಕೊಡಾಕ ರೊಕ್ಕ ತಗೋತಾರಂತ. ನೋಡು ನನಗೇನೂ ರೊಕ್ಕ ಬ್ಯಾಡ. ಇಲೆಕ್ಸನ್‌ದಾಗ ವೋಟ್ ಹಾಕೂವಷ್ಟು ಅಭಿಮಾನ ಇಟ್ಟಕೊಂಡ್ರ ಸಾಕು'. ಮಾಯಕ್ಕ ಹಾಗೆ ಹೇಳಿ ಒಂದು ತಿಂಗಳು ಸಹ ಆಗಿರಲಿಲ್ಲ. ಮಲ್ಲೂರು ಬಸ್‌ಸ್ಟ್ಯಾಂಡ್ ಮತ್ತು ಬೈಲಹೊಂಗಲದಲ್ಲಿ ಎರಡು ಕಡೆ ಲಕ್ಷೀಕಾಂತ ಇವಳು ಉದ್ಘಾಟನೆ ಮಾಡುತ್ತಿರುವ ಬೋರ್ಡ್ ಹಾಕಿಸಿದ. ಮಲ್ಲೂರಿನ ಆಧುನಿಕ ಇತಿಹಾಸದಲ್ಲಿ ಆ ಬೋರ್ಡಿಗೆ ದೊಡ್ಡ ಮಹತ್ವ ಪ್ರಾಪ್ತವಾಯಿತು. ಶಿಲಾಶಾಸನಕ್ಕೆ ಇರುವ ಪ್ರಾಮುಖ್ಯತೆ ಅದಕ್ಕೂ ದಕ್ಕಿತು. ಮೊದಮೊದಲು ಅವಳಿಗೆ ಮಾತಾಡಲು ಸ್ವಲ್ಪವೂ ಬರುತ್ತಿರಲಿಲ್ಲ. ಇಷ್ಟೆಲ್ಲ ಹೇಗೆ ಕಲಿತಳೋ? ಅವಳ ಮಾತುಗಳು ಸಹ ಎಷ್ಟೊಂದು ಸ್ಪಷ್ಟ.

ನಸುಕಿನಲ್ಲಿ ಎದ್ದು ಆಕೆ ಭಾಷಣಗಳನ್ನು ಅಭ್ಯಾಸ ಮಾಡುತ್ತಾಳೆ ಎನ್ನುವ ಗಾಳಿಸುದ್ದಿಯಿತ್ತು. ಆಕೆ ಇನ್ನೂ ತುಸು ರಾತ್ರಿಯಿರುವಾಗಲೆ ಏಳುವುದು ನಿಜವಿತ್ತಾದರೂ ಉಳಿದ ಗಾಳಿಮಾತುಗಳೆಲ್ಲ ಗಾಳಿಯಲ್ಲಿ ತೇಲಿಹೋಗುವವೆಂದು ಜನ ಹೇಳುತ್ತಿದ್ದರು. ಪಂಚಾಯಿತಿ ಅಧ್ಯಕ್ಷಳಾದ ಮಾತ್ರಕ್ಕೆ ಕೆಲಸಗಳನ್ನು ಬಿಟ್ಟು ಕೂಡ್ರಲಾದೀತೆ? ನೌಕರಿ ಮಾಡುತ್ತಿರುವ ಹೆಣ್ಣು ಮಕ್ಕಳಂತೆ ಆಕೆ ಮನೆಯಲ್ಲಿ ಅಡುಗೆ ಮಾಡಬೇಕು, ಕಸ ಹೊಡೆಯಬೇಕು, ನೀರು ತರಬೇಕು, ಹೊಲದ ಕೆಲಸ ಮಾಡಿಸಬೇಕು. ಕೆಲಸಗಳು ಒಂದೇ ಎರಡೇ? ತಮ್ಮ ಕೆಲಸ ಮಾಡಿಕೊಡಿ ಎಂದು ಒಮ್ಮೊಮ್ಮೆ ನಸುಕಿನಲ್ಲಿಯೇ ಜನ ಅವಳ ಮನೆಗೆ ಹೋಗುವುದಿತ್ತು.

ಒಮ್ಮೊಮ್ಮೆ ತೀರ ಸ್ವಾರಸ್ಯಕರ ಪ್ರಸಂಗಗಳು ನಡೆಯುತ್ತಿದ್ದವು. ಎಡಗೈಯಲ್ಲಿ ಹಲ್ಲುಜ್ಜುವ ಪುಡಿ ಹಾಕಿಕೊಂಡು ಬಲಗೈಯ ತೋರುಬೆರಳಿನಿಂದಲೋ, ನಡುಬೆರಳಿನಿಂದಲೋ ಹಲ್ಲು ತಿಕ್ಕುತ್ತ ಮಾಯಕ್ಕಳ ಮನೆಗೆ ಬಂದು ತಮ್ಮ ತೊಂದರೆ ಹೇಳಿಕೊಳ್ಳುತ್ತಿದ್ದರು. ಅವಳ ಮನೆಯಲ್ಲಿಯೇ ಚರಿಗೆ ನೀರು ಇಸಿದುಕೊಂಡು ಬಾಯಿತೊಳೆದುಕೊಳ್ಳುವರು. ಮಾಯಕ್ಕ ಅದಕ್ಕೆಲ್ಲ ಬೇಸರಿಸಿಕೊಳ್ಳದೆ ತಾನೆ ನೀರು ತುಂಬಿಕೊಡುವಳು. ಒಮ್ಮೊಮ್ಮೆ ಶಿವಣ್ಣ ತುಂಬಿಕೊಡುತ್ತಿದ್ದ. ಆಮೇಲೆ ಒಂದು ಚರಿಗೆ ನೀರು ಗಟಗಟ ಕುಡಿದು, ತಮ್ಮ ಸಮಸ್ಯೆಯನ್ನು ಸಾದ್ಯಂತವಾಗಿ ವಿವರಿಸಿ ಮನೆಗಳತ್ತ ಹೊರಡುವರು. ಒಬ್ಬೊಬ್ಬರು ತಮ್ಮ ಸಮಸ್ಯೆಗಳನ್ನು ಹೇಳುತ್ತಿರುವಾಗ ಮತ್ತೆ ಕೆಲವರು ಗಸಗಸ ಹಲ್ಲು ತಿಕ್ಕುವ, ಗಳಗಳ ಉಗುಳುವ ಕಾರ್ಯದಲ್ಲಿ ನಿರತರಾಗಿರುವರು. ಜನಪ್ರತಿನಿಧಿಗಳಾದವರು ಸಹಿಸಿಕೊಳ್ಳಬೇಕಾಗುತ್ತದೆ. ಹಾಗೇಕೆ ಮಾಡುತ್ತಿದ್ದೀರೆಂದು ತರಾಟೆಗೆ ತೆಗೆದುಕೊಳ್ಳಲಾಗುವುದಿಲ್ಲ. ಕೊಂಕು ನುಡಿಯಲು ಆಗುವುದಿಲ್ಲ. ಅಕಸ್ಮಾತ್ ಏನಾದರೂ ಬಾಯಿತಪ್ಪಿ ಅಂದರೆ ವ್ಯತಿರಿಕ್ತ ಪರಿಣಾಮ ಬೀರುವ ಸಂಭವವಿರುತ್ತಿತ್ತು.

ಒಬ್ಬೊಬ್ಬರು ಹೀಗೂ ಮಾಡುತ್ತಿದ್ದರು. ಸುಖಾಸುಮ್ಮನೆ ಚೇರಮನ್ ಮನೆಗೆ ಹೋಗುವರು. ಮಾಯಕ್ಕ ಇನ್ನೂ ಎದ್ದಿರದಿದ್ದರೂ ಅಂಗಳದಲ್ಲಿ ಇವರ ಮಾತುಕತೆ, ಬಾಯಿ ಕೇಳಿ ಬಂದು ಆಕೆ ಮನಸ್ಸಿಲ್ಲದ ಮನಸ್ಸಿನಿಂದ ಹೊರಗೆ ಬರುವಳು. 'ಹೇಳ್ರಿ ಏನು?' ಅವಳ ಪ್ರಶ್ನೆ ಚುಟುಕಾಗಿರುವುದು. 'ಏನಿಲ್ಲ ಅಕ್ಕಾವ್ರೆ, ನಿಮಗೆ ನಮಸ್ಕಾರ ಹೇಳಾಕ ಬಂದಿದ್ವಿ' ಎಂದು ಹೊರಡುವರು. ಅಲ್ಲಿಂದ ಹೊರಟು ಬಾವಿಕಟ್ಟೆಗೆ ಬಂದು ಅಲ್ಲಿ ನಾಗಣ್ಣನ ಜೊತೆ ಅದು ಇದು ಮಾತನಾಡಿ, ದೊಡ್ಡ ಪರಸಿಕಲ್ಲಿಗೆ ಇದ್ದಿಲು ತೇಯತೊಡಗಿದರು. ತೇಯ್ದು ನುಣ್ಣನೆ ನುಣುಪಾದ ಮೇಲೆ ಅದನ್ನು ತೋರುಬೆರಳಿನಿಂದ ತುಸು ತುಸುವೆ ತೆಗೆದುಕೊಂಡು ಎಲೆ ಅಡಿಕೆ ತಂಬಾಕು ತಿಂದು ಅತ್ತಿಯ ಹಣ್ಣಿನಂತೆ ಅಚ್ಚಕೆಂಪಾಗಿರುವ ಹಲ್ಲು ಬೆಳ್ಳಗೆ ಕಾಣಲೆಂದು ತಾಸುಗಟ್ಟಲೆ ತಿಕ್ಕೇ ತಿಕ್ಕುವರು. ಹಲ್ಲಿನ ದವಾಖಾನೆಗೆ ಹೋದಾಗ ಅಲ್ಲಿ ತೂಗು ಹಾಕಿದ್ದ ಅಚ್ಚ ಬಿಳುಪಿನ ಹಲ್ಲುಗಳನ್ನು ಹೊರಗೆ ಹಾಕಿ ನಗುತ್ತಿರುವವರ ಚಿತ್ರ ನೋಡಿ ಇವರು ನಾಲಗೆಯಿಂದ ತಮ್ಮ ಹಲ್ಲು ಸವರಿಕೊಳ್ಳುವರು. ಮೊದಲಿಗೆ ಮಲ್ಲಿಗೆ ಹೂಗಳಿದ್ದಂತೆ ಇದ್ದ ಬಹಳಷ್ಟು ಮಂದಿಯ ಹಲ್ಲುಗಳು ಈಗ ಕೇಸರಿ, ಕರಿ, ಕೆಂಪು, ನೀಲಿ, ನೇರಳೆ ಮುಂತಾದ ಬಣ್ಣಗಳಲ್ಲಿ ಅದ್ದಿದಂತಾಗಿರುವವು. ಬಹಳ ಕಷ್ಟಪಟ್ಟು ಪಡೆದಿರುವ ಈ ಬಣ್ಣಗಳನ್ನು ತಾವೆಂದೂ ಬಿಟ್ಟುಕೊಡಲಾರವೆಂಬಂತೆ ಆ ಹಲ್ಲುಗಳು ತಮ್ಮ ಮಾಲೀಕರೊಂದಿಗೆ ಜಿದ್ದು ಕಟ್ಟಿದ್ದವು. ಅಷ್ಟಾದರೂ ತಮ್ಮ ಹಲ್ಲುಗಳ ಮೊದಲಿನ ವರ್ಚಸ್ಸನ್ನು ಗಳಿಸಲು ವ್ಯರ್ಥಪ್ರಯತ್ನ ಮಾಡುವವರು ಇದ್ದೇ ಇರುತ್ತಿದ್ದರು. ಅದರ ಸಲುವಾಗಿ ನೂರೆಂಟು ತರಹ ಮುಲಾಮು ಹಚ್ಚಿ ಹಲ್ಲಿನ ದವಡೆಯನ್ನು ಮತ್ತಷ್ಟು ತೆಳುವಾಗಿಸಿಕೊಂಡು ಇನ್ನಷ್ಟು ಸಮಸ್ಯೆ ಮಾಡಿಕೊಂಡಿದ್ದರು. ಇನ್ನೂ ಹರೆಯದಲ್ಲಿಯೆ ಹಲ್ಲು ಕಳೆದುಕೊಂಡು ಬಚ್ಚಬಾಯಿ ಮಾಡಿಕೊಂಡವರೂ ಇದ್ದರು.

ಜಾಹೀರಾತಿನ ಟೂಥ್‌ಪೇಸ್ಟ್‌ಗಿಂತ ತಮ್ಮ ಗ್ರಾಮದ ಇದ್ದಿಲ ಪುಡಿಯ ಮಿಶ್ರಣವೆ ಶ್ರೇಷ್ಠ ಎಂದು ಕಂಡುಕೊಂಡ ಕೆಲವರು ಇದರಲ್ಲಿಯೆ ತಾವು

